**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಹುಕ್ಕೇರಿ.</u>**

CC No.1416/2022
CW-5/ PW-3

ಹೆಸರು : ಸತ್ಯಪ್ಪ ಮಲ್ಲಪ್ಪ ಪಾಟೀಲ
ವಯಸ್ಸು : 40 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಹುಲ್ಲೋಳಿಹಟ್ಟಿ, ತಾಃ ಹುಕ್ಕೇರಿ.

**(ದಿನಾಂಕಃ03.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ</u>**

1. ಚಾಸಾ-1 ನನಗೆ ಗೊತ್ತು. ಆತನ ಮನೆ ನಮ್ಮ ಮನೆಯಿಂದ 100 ಮೀಟರ್ ಅಂತರದಲ್ಲಿದೆ. ಚಾಸಾ-1 ಮತ್ತು 1ನೇ ಆರೊಪಿ ಮನೆಗೆ 100 ಮೀಟರ್ ಅಂತರದಲ್ಲಿದೆ. ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರು ಚಾಸಾ-1 ಮತ್ತು ಚಾಸಾ-4 ಇವರಿಗೆ ಕಂಬಕಕ್ಕೆ ಕಟ್ಟಿ ಹೊಡೆ ಬಡೆ ಮಾಡಿಲ್ಲ. ಚಪ್ಪಲಿ ಹಾರ ಹಾಕಿಲ್ಲ. ಈ ಬಗ್ಗೆ ನಾನು ಏನೂ ನೋಡಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರಿಂದ –</u>**

ಚಾಸಾ-4 ಇವರು ಹಲವು ದಿನಗಳ ಹಿಂದೆ ತನ್ನ ಗಂಡನೊಂದಿಗೆ ಗಲಾಟೆ ಮಾಡಿ ಮಾಡಿದ್ರಿಂದ ಅವಳ ಮನಸ್ಸಿಗೆ ಬೇಜಾರಾಗಿ ಅವಳು ಸಾಯಬೇಕು ಅಂತ ಮನೆಯನ್ನು ಬಿಟ್ಟು ಹೋಗಿದ್ದಳು ಅಂದರೆ ಸರಿಯಲ್ಲ. ಆಗ ಚಾಸ ೧ ಹಾಲಪ್ಪ ಹೀಗೆಲ್ಲ ಮಾಡಬೇಡ ಊರಿನ ಹಿರಿಯರಿಗೆ ಹೇಳಿ ರಾಜಿ ಮಾಡಿಸುತ್ತೇನೆ ಎಂದು ಹೇಳಿದ್ದ ಅಂದರೆ ಸರಿಯಲ್ಲ. ಆದ್ದರಿಂದ

ಚಾಸಾ-4 ಆತನ ಮನೆಯಲ್ಲಿ ಉಳಿದುಕೊಂಡಿದ್ದಳು ಅಂದರೆ ಸರಿಯಲ್ಲ. ಬಹಳ ದಿನ ಆದರೂ ಅವಳ ಗಂಡ ಅವಳನ್ನು ಕರೆಯಲು ಬರಲಿಲ್ಲ ಅಂದರೆ ಸರಿಯಲ್ಲ. ಆಗ ದಿನಾಂಕ ೨೨-೦೩-೨೦೨೨ ರಂದು ಬೆಳಿಗ್ಗೆ ೯-೩೦ ಗಂಟೆಗೆ ಚಾಸಾ-4 ಗಂಡ ಅಲ್ಲಿಗೆ ಬಂದು ಮತ್ತು ಆತನೊಂದಿಗೆ ಉಳಿದಂತ ಆರೋಪಿತರು ಸಹ ಬಂದು ''ನೀನು ನಮ್ಮ ಮನೆಗೆ ಬರಬೇಡ" ಎಂದು  ಅಂತ ಹೇಳಿದರು ಅಂದರೆ ಸರಿಯಲ್ಲ. ಆಗ ಚಾಸ – 4 ಚಾಸಾ-1  ಇವರ ಮನೆಯಲ್ಲಿಯೇ ಇದ್ದರು ಅಂದರೆ ಸರಿಯಲ್ಲ. ಇದರಿಂದ ಸಿಟ್ಟಾದ 1ನೇ ಆರೋಪಿ ಮತ್ತು ಉಳಿದ ಆರೋಪಿತರೆಲ್ಲರೂ ಸೇರಿ ದಿನಾಂಕ ೨೩-೦೩-೨೦೨೨ ರಂದು ಚಾಸಾ-4 ಮತ್ತು ಚಾಸ ೧ ಇವರನ್ನು ಹೊಡೆಬಡಿ ಮಾಡಿ ಬೆಳಿಗ್ಗೆ ೩ ಗಂಟೆಗೆ ಚಾಸ ೧ ಇವರ ಮನೆಯ ಮುಂದೆ ಅವರನ್ನು ಎಬ್ಬಿಸಿ ಅವರಿಬ್ಬರನ್ನು ಹೊರಗಡೆ ಎಳೆದುಕೊಂಡು ಬಂದು ಅವರಿಬ್ಬರು ಅನೈತಿಕ ಸಂಬಂಧ ಹೊಂದಿರುತ್ತಾರೆ ಎಂದು ಸುಳ್ಳು ಆರೋಪ ಮಾಡಿ ಚಾಸಾ-4 ಮತ್ತು ಚಾಸ ೧ ಹಾಲಪ್ಪ ಇವರಿಗೆ ಭೋಸಡಿ ಮಕ್ಕಳ ರಂಡಿ ಮಕ್ಕಳ ಎಂದು ಅವಾಚ್ಯವಾಗಿ ಬೈದು ಚಾಸಾ-4 ಇವರಿಗೆ  ಕೈಗಳಿಂದ ಹೊಡೆಬಡಿ ಮಾಡಿ ಹಲ್ಲೆ ಮಾಡಿ ಅವರನ್ನು ಚಾಸ ೧ ಇವರ ಮನೆಯ ಬಿಲ್ಡಿಂಗ್ ಕಾಲಂ ನ ಕಂಬದ ಹಗ್ಗದಿಂದ  ಕಟ್ಟಿ ಹಾಕಿ ಅಕ್ರಮ ಬಂಧನಕ್ಕೆ ಒಳಪಡಿಸಿ ಚಾಸ ೧ ಇತನಿಗೆ ಚಪ್ಪಲಿ ಹಾರವನ್ನು ಹಾಕಿ ಅವಮಾನ ಮಾಡಿ ಆತನನ್ನು ಜೀವಂತ ಬಿಡುವುದಿಲ್ಲ ಎಂದು ಅವರಿಗೆ ಜೀವ ಬೆದರಿಕೆ ಹಾಕಿದರು ಅಂದರೆ ಸರಿಯಲ್ಲ . ಆಗ ನಾನು ಮತ್ತು ಚಾಸಾ-6 ಬಂದು ಜನಗ ಬಿಡಿಸಿದೊ ಎಂದರೆ ಸರಿಯಲ್ಲ.

ಸದ್ರಿ ಸಾಕ್ಷಿಗೆ ಸರಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯ ಹೇಳಿಕೆ ಭಾಗವನ್ನು ಓದಿ ಹೇಳಿದ್ದು, ಸದ್ರಿ ಸಾಕ್ಷಿಯು ಆ ಹೇಳಿಕೆಯನ್ನು ಪೋಲಿಸರ ಮುಂದೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.  ಸದ್ರಿ ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ " ನಮ್ಮ ಊರಿನ ರಾಜು .................. ಟೈಪ್ ಮಾಡಿಸಿ ಓದಿ ಹೇಳಿದ್ದು, ಕೇಳಿದೆನು, ಸರಿ ಇದೆ"ಅದನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿತರು ನಮ್ಮ ಸಂಬಂಧಿಕರು ಇರುವುದರಿಂದ ಮತ್ತು 1ನೇ ಆರೋಪಿ ಅವಳ ಗಂಡ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿ ಪರ  ಶ್ರೀಃ ಎಸ್ ಬಿ ಜಿ ವಕೀಲರಿಂದ</u>**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೇ

(ಆದಿತ್ಯ ಆರ್. ಕಲಾಲ್)

ಸಿ ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.

**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಹುಕ್ಕೇರಿ.</u>**

CC No.1416/2022
CW-4/ PW-2

ಹೆಸರು : ರೇಶ್ಮಾ ರಾಜು ಸಾಲೀಮನಿ
ವಯಸ್ಸು : 35 ವರ್ಷ
ಉದ್ಯೋಗ : ಒಕ್ಕಲುತನ
ವಾಸಸ್ಥಳ : ಹುಲ್ಲೋಳಿಹಟ್ಟಿ, ತಾಃ ಹುಕ್ಕೇರಿ.

**(ದಿನಾಂಕಃ03.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ</u>**

1. 1ನೇ ಆರೋಪಿ ನನ್ನ ಗಂಡ. ಉಳಿದ ಆರೋಪಿತರು ನನ್ನ ಸಂಬಂಧಿಕರು. ಚಾಸಾ-1 ನಮಗೆ ಅಣ್ಣ ತಮ್ಮಂದಿರು. ಆರೋಪಿತರು ನನಗೆ ಹೊಡೆ ಬಡೆ ಮಾಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರು ನನಗೆ ಕಂಬಕಕ್ಕೆ ಕಟ್ಟಿ ಹೊಡೆ ಬಡೆ ಮಾಡಿಲ್ಲ. ಚಪ್ಪಲಿ ಹಾರ ಹಾಕಿಲ್ಲ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರಿಂದ -</u>

ಹಲವು ದಿನಗಳ ಹಿಂದೆ ನನ್ನ ಗಂಡ ನನ್ನೊಂದಿಗೆ ಗಲಾಟೆ ಮಾಡಿ ಮಾಡಿದ್ರಿಂದ ನನಗೆ ಮನಸ್ಸಿಗೆ ಬೇಜಾರಾಗಿ ನಾನು ಸಾಯಬೇಕು ಅಂತ ಮನೆಯನ್ನು ಬಿಟ್ಟು ಹೋಗಿದ್ದೆ ಅಂದರೆ ಸರಿಯಲ್ಲ. ಆಗ ಚಾಸ ೧ ಹಾಲಪ್ಪ ಹೀಗೆಲ್ಲ ಮಾಡಬೇಡ ಊರಿನ ಹಿರಿಯರು ಹೇಳಿ ರಾಜಿ ಮಾಡಿಸುತ್ತೇನೆ ಎಂದು ಹೇಳಿದ ಅಂದರೆ ಸರಿಯಲ್ಲ ಆದ್ದರಿಂದ ನಾನು ಆತನ ಮನೆಯಲ್ಲಿ ಉಳಿದುಕೊಂಡಿದ್ದೆ ಅಂದರೆ ಸರಿಯಲ್ಲ. ಬಹಳ ದಿನ ಆದರೂ ನನ್ನ ಗಂಡ ನನ್ನನ್ನು ಕರೆಯಲು

ಬರಲಿಲ್ಲ ಅಂದರೆ ಸರಿಯಲ್ಲ. ಆಗ ದಿನಾಂಕ ೨೨-೦೩-೨೦೨೨ ರಂದು ಬೆಳಿಗ್ಗೆ ೯-೩೦ ಗಂಟೆಗೆ ನನ್ನ ಗಂಡ ಅಲ್ಲಿಗೆ ಬಂದು ಮತ್ತು ಆತನೊಂದಿಗೆ ಉಳಿದಂತ ಆರೋಪಿತರು ಸಹ ಬಂದು ನೀನು ನಮ್ಮ ಮನೆಗೆ ಬರಬೇಡ ಅಂತ ಹೇಳಿದರು ಅಂದರೆ ಸರಿಯಲ್ಲ. ನಾನು ವಾಪಸ್ ಚಾಸ ೧ ಇವರ ಮನೆಯಲ್ಲಿಯೇ ಇದ್ದೆ ಅಂದರೆ ಸರಿಯಲ್ಲ. ಇದರಿಂದ ಸಿಟ್ಟಾದ ನನ್ನ ಗಂಡ ಮತ್ತು ಉಳಿದ ಆರೋಪಿತರೆಲ್ಲರೂ ಸೇರಿ ದಿನಾಂಕ ೨೩-೦೩-೨೦೨೨ ರಂದು ನನ್ನನ್ನು ಮತ್ತು ಚಾಸ ೧ ಇವರನ್ನು ಹೊಡೆಬಡಿ ಮಾಡಿ ಬೆಳಿಗ್ಗೆ ೩ ಗಂಟೆಗೆ ನಾನಿರುವ ಚಾಸ ೧ ಇವರ ಮನೆಯ ಮುಂದೆ ನಮ್ಮನ್ನು ಎಬ್ಬಿಸಿ ನಾವಿಬ್ಬರು ಹೊರಗಡೆ ಬಂದಾಗ ನಾವಿಬ್ಬರು ಅನೈತಿಕ ಸಂಬಂಧ ಹೊಂದಿರುತ್ತೇವೆ ಎಂದು ಸುಳ್ಳು ಆರೋಪ ಮಾಡಿ ನನಗೆ ಮತ್ತು ಚಾಸ ೧ ಹಾಲಪ್ಪ ಇತನಿಗೆ ಭೋಸಡಿ ಮಕ್ಕಳ ರಂಡಿ ಮಕ್ಕಳ ಎಂದು ಅವಾಚ್ಯವಾಗಿ ಬೈದು ನಮ್ಮನ್ನು ಕೈಗಳಿಂದ ಹೊಡೆಬಡಿ ಮಾಡಿ ಹಲ್ಲೆ ಮಾಡಿ ನಮ್ಮನ್ನು ಚಾಸ ೧ ಇವರ ಮನೆಯ ಬಿಲ್ಡಿಂಗ್ ಕಾಲಂ ನ ಕಂಬದ ಹಾಗದಿಯಿಂದ ಕಟ್ಟಿ ಹಾಕಿ ಅಕ್ರಮ ಬಂಧನಕ್ಕೆ ಒಳಪಡಿಸಿ ಚಾಸ ೧ ಇತನಿಗೆ ಚಪ್ಪಲಿ ಹಾರವನ್ನು ಹಾಕಿ ಅವಮಾನ ಮಾಡಿ ಆತನನ್ನು ಜೀವಂತ ಬಿಡುವುದಿಲ್ಲ ಎಂದು ನಮಗೆ ಜೀವ ಬೆದರಿಕೆ ಹಾಕಿದರು ಅಂದರೆ ಸರಿಯಲ್ಲ ನಂತರ ನಾನು ಹೊಡೆಬಡಿ ಮಾಡಿದರಿಂದ ಆಸ್ಪತ್ರೆಗೆ ಹೋಗಿ ಉಪಚಾರ ಪಡೆದುಕೊಂಡೆ ಅಂದರೆ ಸರಿಯಲ್ಲ. ಆಗ ಸತ್ಯಪ್ಪ ಪಾಟೀಲ್ ಮತ್ತು ಇತರರು ಬಂದು ಜಗಳ ಬಿಡಿಸಿದರು ಅಂದರೆ ಸರಿಯಲ್ಲ ಬೆಳಿಗ್ಗೆ ೬-೩೦ ಕ್ಕೆ ಪೊಲೀಸರು ೧೧೨ ವಾಹನದಲ್ಲಿ ಬಂದು ನಮ್ಮನ್ನು ಬಿಡಿಸಿದರು ಅಂದರೆ ಸರಿಯಲ್ಲ.

ಸದ್ರಿ ಸಾಕ್ಷಿಗೆ ಸರಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯ ಹೇಳಿಕೆ ಭಾಗವನ್ನು ಓದಿ ಹೇಳಿದ್ದು, ಸದ್ರಿ ಸಾಕ್ಷಿಯು ಆ ಹೇಳಿಕೆಯನ್ನು ಪೋಲಿಸರ ಮುಂದೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದ್ರಿ ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ ‘20 ದಿನಗಳ ಹಿಂದೆ ಟೈಪ್ ಮಾಡಿಸಿ .................. ಫಿರ್ಯಾದಿ ಕೊಟ್ಟಿದುದ ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ”ಅದನ್ನು ನಿ.ಪಿ-5 ಎಂದು ಗುರುತಿಸಲಾಯಿತು. ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿತರು ನನಗೆ ಸಂಬಂಧಿಕರು ಇರುವುದರಿಂದ ಮತ್ತು 1ನೇ ಆರೋಪಿ ನನ್ನ ಗಂಡ ಇರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ಶ್ರೀಃ ಎಸ್ ಬಿ ಜಿ ವಕೀಲರಿಂದ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೇ

(ಆದಿತ್ಯ ಆರ್. ಕಲಾಲ್)

ಸಿ ಜೆ ಮತ್ತು ಜೆ.ಎಂ.ಎಫ್.ಸಿ, ಹುಕ್ಕೇರಿ.